**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

**(ಚಾ.ಸಾ.4/ಪ್ರಾ.ಸಾ.4)**

ತಾಃ29-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಚಂದ್ರಕಾಂತ್ |
| ತಂದೆಯ ಹೆಸರು | ರಾಮಚಂದ್ರ |
| ವಯಸ್ಸು | 32 ವರ್ಷ |
| ಉದ್ಯೋಗ | ಟೆಕ್ನೀಷಿಯನ್, ಏರ್ ಪೋರ್ಟ್ |
| ವಾಸ ಸ್ಥಳ | ಕಮ್ಮನಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿದಾರರು ನಿಪಿ.2 ಮಹಜರ್ ದಾಖಲೆಯನ್ನು ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ನಿಪಿ.2 ಮಹಜರ್ ಅನ್ನು ಸುಮಾರು 3-4 ವರ್ಷಗಳ ಹಿಂದೆ ಚಾಸಾ.2 ರವರ ಮನೆಯಲ್ಲಿ ಮಾಡಿರುತ್ತಾರೆ. ನನಗೆ ತಿಳಿದ ಹಾಗೆ ಚಾಸಾ.2 ರವರ ಸರ ಕಿತ್ತುಕೊಂಡು ಹೋದ ಬಗ್ಗೆ ಮಹಜರ್ ಮಾಡಲು ಬಂದಿರುತ್ತಾರೆ. ಆ ಸಮಯದಲ್ಲಿ ಚಾಸಾ.1 ಪ್ರಕಾಶ್ ಇವರು ಪೋಲೀಸರಿಗೆ ಮಾಹಿತಿ ನಿಡುತ್ತಿದ್ದು, ನನ್ನ

ಜೊತೆ ಚಾಸಾ.3 ರವರು ಸ್ಥಳದಲ್ಲಿ ಇದ್ದರು. ಸ್ಥಳದಲ್ಲಿ ರಕ್ತದ ಕಲೆ ಇದ್ದ ಒಂದು ಸಿಗರೇಟ್ ತುಂಡು ಹಾಗೂ ರಕ್ತದ ಕಲೆ ಬಿದ್ದಿದ್ದು, ರಕ್ತದ ಕಲೆಯನ್ನು ಪೋಲೀಸರು ಹತ್ತಿಯಲ್ಲಿ ತೆಗೆದುಕೊಂಡಿರುತ್ತಾರೆ. ಅವುಗಳನ್ನು ಒಂದು ಪ್ಲಾಸ್ಟಿಕ್ ರೀತಿಯಲ್ಲಿದ್ದ ಕಂಟೈನರ್ ಗೆ ಹಾಕಿರುತ್ತಾರೆ. ಸಾಕ್ಷಿದಾರರು ಮು.ಮಾ.1 ಅನ್ನು ನೋಡಿ ಅದೇತರ ವಸ್ತುಗಳು ಸ್ಥಳದಲ್ಲಿ ಸಿಕ್ಕಿದ್ದು, ಮು.ಮಾ.1 ಅನ್ನು ಪ್ಯಾಕ್ ಮಾಡಲು ಉಪಯೋಸಿದ ಬಟ್ಟೆಯ ಮೇಲೆ ಅಂಟಿಸಿದ ಚೀಟಿಯಲ್ಲಿ ತನ್ನ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಮಹಜರ್ ಅನ್ನು ಸಂಜೆ 05:30 ರಿಂದ 06:30 ರ ಸಮಯದಲ್ಲಿ ಮಾಡಿರುತ್ತಾರೆ. ಸಾಕ್ಷಿದಾರರು ಮತ್ತೊಂದು ಬಿಳಿ ಬಟ್ಟೆಯ ಮೇಲೆ ಅಂಟಿಸಿದ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. ನಿಪಿ.2 ಅನ್ನು ದಿನಾಂಕ 24-12-2018 ರಂದು ಮಾಡಿರುತ್ತಾರೆ ಎಂದರೆ ಸರಿ. ಆ ದಿನ ಚಾಸಾ.2 ರವರ ಮನೆಯ ಅಡಿಗೆ ಮನೆ ಹಾಗು ಹಾಲ್ ನಲ್ಲಿ ರಕ್ತ ಬಿದ್ದಿದ್ದು, ಇದರ ಜೊತೆ ಅರ್ಧ ಸೇದಿದ ರಕ್ತದ ಕಲೆ ಇದ್ದ ಸಿಗರೇಟ್ ತುಂಡು ಬಿದ್ದಿತ್ತು ಎಂದರೆ ಸರಿ. ಪೋಲೀಸರು ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಯನ್ನು

ಹತ್ತಿಯಲ್ಲಿ ತೆಗೆದುಕೊಂಡು ರಕ್ತದ ಕಲೆ ಇದ್ದ ಸಿಗರೇಟ್ ತುಂಡನ್ನು ನಮ್ಮ ಸಮಕ್ಷಮ ತೆಗೆದುಕೊಂಡು ಒಂದು ಪ್ಯಾಸ್ಟಿಕ್ ಕಂಟೈನರ್ ಗೆ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ನಮ್ಮ ಸಹಿ ಇದ್ದ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿ. ಅದೇ ರೀತಿ ಪೋಲೀಸರು ಸ್ಥಳಕ್ಕೆ ತಂದಿದ್ದ ಹತ್ತಿಯಲ್ಲಿ ಮಾದರಿಗಾಗಿ ಸ್ವಲ್ಪ ತೆಗೆದು ಅದನ್ನು ಪ್ಯಾಸ್ಟಿಕ್ ಕಂಟೈನರ್ ಗೆ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ನಮ್ಮ ಸಹಿ ಇದ್ದ ಚೀಟಿಯನ್ನು ಅಂಟಿಸಿದ್ದರು ಎಂದರೆ ಸರಿ. ಸಾಕ್ಷಿದಾರರಿಗೆ ಮು.ಮಾ.2 ಮಾದರಿ ಹತ್ತಿಯನ್ನು ತೋರಿಸಿ ಅದನ್ನು ಪೋಲೀಸರು ಜಪ್ತಿಪಡಿಸಿರುವುದಾಗಿ ಸೂಚಿಸಿದ್ದು, ಸಾಕ್ಷಿಯು ಹೌದು ಎಂದು ಒಪ್ಪಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಯು.ಕೆ.ವಕೀಲರಿಂದಃ</u>**

1. ದಿನಾಂಕ 24-12-2018 ರಂದು ನಾನು ಚಾಸಾ.2 ರವರ ಮನೆಯ ಬಳಿ ಇದ್ದೆನು. ಚಾಸಾ.2 ರವರ ಮಗ ನನ್ನ ಸ್ನೇಹಿತನಾಗಿದ್ದು, ಸರ ಕಿತ್ತುಕೊಂಡು ಹೋದ ಬಗ್ಗೆ ನನಗೆ ಫೋನ್ ಮಾಡಿ ಕರೆಸಿದ್ದ ಕಾರಣ ಸ್ಥಳಕ್ಕೆ ಹೋಗಿದ್ದೆನು. ನಾನು ಚಾಸಾ.2 ರವರ ಮನೆಯ ಬಳಿ ಹೋದಾಗ ಪೋಲೀಸರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಪೋಲೀಸರ ಹೆಸರು ನನಗೆ ತಿಳಿದಿಲ್ಲ. ಅದೇ ರೀತಿ ನನ್ನನ್ನು ಕರೆದ ಪೋಲೀಸ್ ಅಧಿಕಾರಿಯ ಹೆಸರು ನನಗೆ ತಿಳಿದಿಲ್ಲ. ಮಹಜರ್ ಗೆ ಸಹಕರಿಸುವಂತೆ ಪೋಲೀಸರು ನನಗೆ ಲಿಖಿತ ನೋಟೀಸ್ ನೀಡಿರಲಿಲ್ಲ. ಪೋಲೀಸರು ಸ್ಥಳಕ್ಕೆ ಬಂದಾಗ ಏನೂ ವಸ್ತುಗಳನ್ನು ತಂದಿರಲಿಲ್ಲ, ಆದರೆ ಕಂಟೈನರ್ ಗಳನ್ನು ತಂದಿದ್ದರು. ಚಾಸಾ.2 ರವರ ಮನೆಯಲ್ಲಿ ಎಷ್ಟು ಕೊಠಡಿಗಳು ಯಾವ ಯಾವ

ಧಿಕ್ಕಿನಲ್ಲಿ ಇರುತ್ತದೆ ಎಂದು ನನಗೆ ನೆನಪಿಲ್ಲ. ನಿಪಿ.2 ಮಹಜರ್ ನಲ್ಲಿ ಚಾಸಾ.2 ರವರ ಮನೆಯಲ್ಲಿ ಎಷ್ಟು ಕೊಠಡಿಗಳು ಇರತ್ತುದೆ, ಹಾಲ್ ಯಾವ ಧಿಕ್ಕಿನಲ್ಲಿ ಇರುತ್ತದೆ ಎಂದು ಬರೆದಿರುತ್ತಾರಾ ಇಲ್ಲವಾ ಎಂದು ನನಗೆ ತಿಳಿದಿಲ್ಲ. ಚಾಸಾ.2 ರವರ ಮನೆಯ ಚೆಕ್ಕುಬಂದಿ ನನಗೆ ತಿಳಿದಿಲ್ಲ.

2. ಪೋಲೀಸರು ಸ್ಥಳದಲ್ಲಿ ರಕ್ತದ ಕಲೆ ಇದ್ದ ಸಿಗರೇಟ್ ತುಂಡು, ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಯನ್ನು ಜಪ್ತಿ ಪಡಿಸಿರುತ್ತಾರೆ. ಸದರಿ ಸಿಗರೇಟ್ ಯಾವ ಸಿಗರೇಟ್ ಎಂದು ನನಗೆ ತಿಳಿದಿಲ್ಲ. ಸಿಗರೇಟ್ ತುಂಡು ಹಾಗೂ ರಕ್ತದ ಕಲೆಯನ್ನು ಪ್ಲಾಸ್ಟಿಕ್ ಕಂಟೈನರ್ ಅಲ್ಲಿ ಹಾಕಿದ್ದು, ಅದನ್ನು ಯಾವುದರಲ್ಲಿ ಹಾಕಿಕೊಂಡರು ಎಂದು ನನಗೆ ತಿಳಿದಿಲ್ಲ. ಪ್ಲಾಸ್ಟಿಕ್ ಕಂಟೈನರ್ ಗೆ ನನ್ನ ಸಹಿಯನ್ನು ಪಡೆದಿಲ್ಲ, ಆದರೆ ಬಟ್ಟೆಯ ಬ್ಯಾಗ್ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಅವುಗಳ ಮೇಲೆ ಏನಾದರು ನಿಶಾನೆ ಹಾಕಿರುತ್ತಾರಾ ಎಂದು ನನಗೆ ತಿಳಿದಿಲ್ಲ. ಮು.ಮಾ.1 ಮತ್ತು 2ರ ವಸ್ತುಗಳಿಗೆ ಸಂಭಂದಿಸಿದ ಬಟ್ಟೆ ಚೀಟಿಯ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2ರ ವಸ್ತುಗಳಿಗೆ ಸಂಭಂದಿಸಿದ ಬಟ್ಟೆ ಚೀಟಿಯ ಮೇಲೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ಮಹಜರ್ ಆದ ನಂತರ ನಾನು ಪೋಲೀಸ್ ಠಾಣೆಗೆ ಹೋಗಿರಲಿಲ್ಲ. ಮಹಜರ್ ಗೆ ಸಂಭಂದಿಸಿದಂತೆ ನಾನು ಪೋಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ ಆದರೆ ಸ್ಥಳದಲ್ಲಿ ಬರೆದುಕೊಂಡಿರುತ್ತಾರೆ. ಸ್ಥಳದಲ್ಲಿ ಬರೆದುಕೊಂಡ ವಿಚಾರವನ್ನು

ಲ್ಯಾಪ್ ಟಾಟ್ ನಲ್ಲಿ ಬೆರಳಚ್ಚು ಮಾಡಿಸಿದ್ದರು. ಸ್ಥಳದಲ್ಲಿ ಬೆರಳಚ್ಚು ಮಾಡಿಕೊಂಡ ದಾಖಲೆ ಪ್ರಿಂಟ್ ಅನ್ನು ಠಾಣೆಯಲ್ಲಿ ತೆಗೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಏನೂ ವಿಚಾರ ತಿಳಿಯದಿದ್ದರೂ ಸಹ ಚಾಸಾ.2 ರವರ ಮಗ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.